# ಟಿಪ್ಪಣಿ

# ಕರ್ನಾಟಕ ಕೋವಿಡ್ –19 ಲಸಿಕಾಕರಣದ ಡ್ರೈ ರನ್ ವರದಿ – 08.01.2021

ರಾಜ್ಯದಲ್ಲಿ ಕೋವಿಡ್ 19 ಲಸಿಕೆ ಪರಿಚಯಿಸುತ್ತಿರುವ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಆದೇಶದಂತೆ ಕೋವಿಡ್ ಲಸಿಕೆಯನ್ನು ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿಯ ಕಾರ್ಯಕರ್ತರ ಗುಂಪಿಗೆ ಆದ್ಯತೆಯ ಮೇರೆಗೆ ನೀಡಲಾಗುವುದು. ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕಾರ್ಯಕರ್ತರ ಮಾಹಿತಿಯನ್ನು ಈಗಾಗಲೇ ಕೋವಿನ್ ಪೋರ್ಟಲ್ ನಲ್ಲಿ ಇಂದೀಕರಿಸಲಾಗಿದೆ.

ಭಾರತ ಸರ್ಕಾರದ ಮಾರ್ಗಸೂಚಿಯಂತೆ ದಿನಾಂಕ: 02.01.2021 ರಂದು ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು (ಬಿಬಿಎಂಪಿ ಒಳಗೊಂಡಂತೆ), ಬೆಳಗಾವಿ, ಮೈಸೂರು, ಕಲ್ಬುರ್ಗಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಒಂದು ಲಸಿಕಾ ಸತ್ರ, ತಾಲ್ಲೂಕು ಮಟ್ಟದ ಒಂದು ಲಸಿಕಾ ಸತ್ರ ಮತ್ತು ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡ್ರೈ ರನ್ ಯಶಸ್ವಿಯಾಗಿ ನಡೆಸಲಾಯಿತು.

ಮುಂದುವರೆದು ಭಾರತ ಸರ್ಕಾರದ ಸೂಚನೆಯಂತೆ ಕರ್ನಾಟಕದಲ್ಲಿ 31 (ಬಿಬಿಎಂಪಿ ಒಳಗೊಂಡಂತೆ) ಜಿಲ್ಲೆಗಳ 281 ಆರೋಗ್ಯ ಕೇಂದ್ರಗಳಲ್ಲಿ ದಿನಾಂಕ 08.01.2021 ರಂದು ಡ್ರೈ ರನ್ ಯಶಸ್ವಿಯಾಗಿ ನಡೆಸಲಾಯಿತು.

**ಜಿಲ್ಲಾವಾರು ಡ್ರೈ ರನ್ ಲಸಿಕಾ ಸತ್ರಗಳ ವಿವರ ಈ ಕೆಳಕಂಡಂತಿದೆ**

| ಜಿಲ್ಲೆಗಳ ಹೆಸರು | ಲಸಿಕಾ ಸತ್ರಗಳ ಸಂಖ್ಯೆ |
|---|---|
| ಬಾಗಲಕೋಟೆ | 7 |
| ಬಳ್ಳಾರಿ | 7 |
| ಬೆಂಗಳೂರು ಗ್ರಾಮಾಂತರ | 5 |
| ಬೆಂಗಳೂರು ನಗರ | 11 |
| ಬಿಬಿಎಂಪಿ | 8 |
| ಬೆಳಗಾವಿ | 7 |
| ಬೀದರ್ | 21 |
| ಚಾಮರಾಜನಗರ | 4 |
| ಚಿಕ್ಕಬಳ್ಳಾಪುರ | 6 |
| ಚಿಕ್ಕಮಗಳೂರು | 6 |
| ಚಿತ್ರದುರ್ಗ | 6 |
| ದಕ್ಷಿಣ ಕನ್ನಡ | 5 |
| ದಾವಣಗೆರೆ | 6 |
| ಧಾರವಾಡ | 7 |
| ಗದಗ | 5 |
| ಹಾಸನ | 7 |
| ಹಾವೇರಿ | 5 |
| ಕಲ್ಬುರ್ಗಿ | 6 |
| ಕೊಡಗು | 6 |
| ಕೋಲಾರ್ | 8 |
| ಕೊಪ್ಪಳ | 7 |
| ಮಂಡ್ಯ | 7 |
| ಮೈಸೂರು | 8 |
| ರಾಯಚೂರು | 71 |
| ರಾಮನಗರ | 8 |
| ಶಿವಮೊಗ್ಗ | 9 |
| ತುಮಕೂರು | 5 |
| ಉಡುಪಿ | 8 |
| ಉತ್ತರ ಕನ್ನಡ | 6 |
| ವಿಜಯಪುರ | 3 |
| ಯಾದಗಿರಿ | 6 |
| ಒಟ್ಟು | 281 |

ಡಾ. ಸಿ.ಎನ್ ಅಶ್ವಥ್ ನಾರಾಯಣ್, ಮಾನ್ಯ ಉಪ ಮುಖ್ಯ ಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ ರವರು ಖುದ್ದಾಗಿ ಜಿಲ್ಲಾ ಆಸ್ಪತ್ರೆ, ರಾಮನಗರ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಡಾ.ಕೆ ಸುಧಾಕರ್, ಮಾನ್ಯ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ, ರವರು ಖುದ್ದಾಗಿ ಆಸ್ಟರ್ ಸಿ.ಎಂ.ಐ ಆಸ್ಪತ್ರೆ, ಯಲಹಂಕ, ಬೆಂಗಳೂರು ಮತ್ತು ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ಕುಮಾರ್ ಬಂಗಾರಪ್ಪ, ಮಾನ್ಯ ಶಾಸಕರು, ಸೊರಬ ರವರು ಖುದ್ದಾಗಿ ತಾಲ್ಲೂಕು ಆಸ್ಪತ್ರೆ, ಸೊರಬ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ಎಂ.ಪಿ ಕುಮಾರ ಸ್ವಾಮಿ, ಮಾನ್ಯ ಶಾಸಕರು, ಮೂಡಿಗೆರೆ ಮತ್ತು ಶ್ರೀ ಪ್ರಾಣೇಶ್, ಎಮ್.ಎಲ್.ಸಿ, ಚಿಕ್ಕಮಗಳೂರು ಕ್ಷೇತ್ರ ರವರು ಖುದ್ದಾಗಿ ತಾಲ್ಲೂಕು ಆಸ್ಪತ್ರೆ, ಮೂಡಿಗೆರೆ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ಸುರೇಶ್, ಮಾನ್ಯ ಶಾಸಕರು, ತರಿಕೆರೆ ರವರು ಖುದ್ದಾಗಿ ಸಮುದಾಯ ಆರೋಗ್ಯ ಕೇಂದ್ರ, ಅಜ್ಜಾಂಪುರ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ಹೆಚ್ ಹಾಲಪ್ಪ, ಮಾನ್ಯ ಶಾಸಕರು, ಸಾಗರ ರವರು ಖುದ್ದಾಗಿ ತಾಲ್ಲೂಕು ಆಸ್ಪತ್ರೆ, ಸಾಗರ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ವಿರುಪಾಕ್ಷಪ್ಪ ಬಳ್ಳಾರಿ, ಮಾನ್ಯ ಶಾಸಕರು, ಬ್ಯಾಡಗಿ ರವರು ಖುದ್ದಾಗಿ ತಾಲ್ಲೂಕು ಆಸ್ಪತ್ರೆ, ಬ್ಯಾಡಗಿ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ಸಂಗಮೇಶ್, ಮಾನ್ಯ ಶಾಸಕರು, ಭದ್ರಾವತಿ ರವರು ಖುದ್ದಾಗಿ ತಾಲ್ಲೂಕು ಆಸ್ಪತ್ರೆ, ಭದ್ರಾವತಿ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ನಾಗೇಶ್, ಮಾನ್ಯ ಅಬಕಾರಿ ಸಚಿವರು, ಕರ್ನಾಟಕ ಸರ್ಕಾರ ಮತ್ತು ಶ್ರೀ ಮುನಿಸ್ವಾಮಿ, ವಿಧಾನಸಭಾ ಸದಸ್ಯರು, ಕೋಲಾರ್, ಶ್ರೀ ಗೋವಿಂದರಾಜ್, ಎಮ್.ಎಲ್.ಸಿ, ಕೋಲಾರ್ ಕ್ಷೇತ್ರ ಮತ್ತು ಶ್ರೀ ಶ್ರೀನಿವಾಸ್, ಶಾಸಕರು, ಕೋಲಾರ್ ರವರು ಖುದ್ದಾಗಿ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ್ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು

ಶ್ರೀ ಪುಟ್ಟರಂಗಶೆಟ್ಟಿ, ಮಾನ್ಯ ಶಾಸಕರು, ಚಾಮರಾಜನಗರ ರವರು ಖುದ್ದಾಗಿ ಜಿಲ್ಲಾ ಆಸ್ಪತ್ರೆ, ಚಾಮರಾಜನಗರ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀ ಸಿದ್ದನಗೌಡ, ಜಿಲ್ಲಾ ಪಂಚಾಯತ್ ಸದಸ್ಯರು, ರಾಯಚೂರು ಜಿಲ್ಲೆ ರವರು ಖುದ್ದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ತುರುವಿಹಾಳ್ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಪರಿಶೀಲಿಸಿದರು.

ಮಾನ್ಯ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು ರವರು ಕಣ್ಣನಹಳ್ಳಿ ಇಲ್ಲಿನ ಡ್ರೈ ರನ್ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಿದರು.

ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಡ್ರೈ ರನ್ ಸತ್ರಗಳಿಗೆ ಭೇಟಿ ನೀಡಿ ಡ್ರೈ ರನ್ ಚಟುವಟಿಕೆಗಳನ್ನು ಮೇಲ್ವಿಚಾರಣೆ ನಡೆಸಿದರು.

**ಡ್ರೈ ರನ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಕರ್ನಾಟಕ ರಾಜ್ಯವು ಕೋವಿಡ್ ಲಸಿಕೆ ಲಭ್ಯವಾದಾಗ ಲಸಿಕಾಕರಣದ ನಿರ್ವಹಣೆಯ ವಿಶ್ವಾಸವನ್ನು ಹೊಂದಿದೆ**